ಕರ್ನಾಟಕ ಗೃಹ ಮಂಡಳಿಯ ವಸತಿ ಯೋಜನೆಗಳಿಗೆ ರಾಜ್ಯ ಸರ್ಕಾರದ ಅನುದಾನ ಇರುವುದಿಲ್ಲ. ಮೇಲೆ ಕ್ರಮ ಸಂಖ್ಯೆ (2) ರ (1 ರಿಂದ 4)ರಲ್ಲಿ ತಿಳಿಸಿರುವ ವಸತಿ ಯೋಜನೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ಗೃಹ ಮಂಡಳಿಯು ರೂ.22,500 ಲಕ್ಷಗಳ ಯೋಜನಾ ಮೊತ್ತವನ್ನು ಅಂದಾಜಿಸಿದೆ.

ರಾಜೀವ್ ಆವಾಸ್ ಯೋಜನೆ

37 (72) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಕೊಳಚೆ ನಿರ್ಮೂಲನೆ ಮಂಡಳಿ ವತಿಯಿಂದ ರಾಜೀವ್ ಆವಾಸ್ ವಸತಿ ಯೋಜನೆಯಡಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರಸಕ್ತ ಸಾಲಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮನೆಗಳ ಸಂಖ್ಯೆ ಎಷ್ಟು; ಈ ಬಗ್ಗೆ ನಕ್ಷೆ ತಯಾರಿಸುವ ಕೆಲಸ ಯಾವ ಹಂತದಲ್ಲಿದೆ;

ಆ) ಈ ಯೋಜನೆಯ ಅನುಷ್ಠಾನಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು; ಈ ಪೈಕಿ ಎಷ್ಟು ಮೊತ್ತದ ಹಣ ಕೇಂದ್ರ ಸರ್ಕಾರ ಒದಗಿಸುತ್ತದೆ; ಇದಕ್ಕೆ ರಾಜ್ಯ ಸರ್ಕಾರ ವೆಚ್ಚ ಮಾಡಲಿರುವ ಹಣದ ಮೊತ್ತವೆಷ್ಟು;

ಇ) ಈ ಯೋಜನೆಯಡಿಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ಮತಕ್ಷೇತ್ರದಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ. (ಪೂರ್ಣ ವಿವರಗಳನ್ನು ಒದಗಿಸುವುದು);

ಶ್ರೀ ಸೋಮಣ್ಣ (ಮಾನ್ಯ ವಸತಿ ಸಚಿವರು):–

ಅ) ಭಾರತ ಸರ್ಕಾರವು ರಾಜೀವ್ ಆವಾಸ್ ಯೋಜನೆಯನ್ನು 2009–10ನೇ ಸಾಲಿನಲ್ಲಿ ಜಾರಿಗೊಳಿಸಿರುತ್ತಾರೆ. ಸದರಿ ಯೋಜನೆಯಡಿ ಮುಂದಿನ 5 ವರ್ಷದೊಳಗಾಗಿ 'ಕೊಳಚೆ ಮುಕ್ತ ಭಾರತ' ನಿರ್ಮಾಣ ಮಾಡುವ ದಿಕ್ಕಿನಲ್ಲಿ ನಗರದ ಬಡ ಜನರ ಹಾಗೂ ಕೊಳಚೆ ಪ್ರದೇಶ ನಿವಾಸಿಗಳ ಅಭಿವೃದ್ಧಿಗಾಗಿ ರಾಜೀವ್ ಆವಾಸ್ ಯೋಜನೆಯನ್ನು ಜಾರಿಗೊಳಿಸಲಾಗಿರುತ್ತದೆ.

ಕೇಂದ್ರ ಸರ್ಕಾರದಿಂದ ರಾಜೀವ್ ಆವಾಸ್ ಯೋಜನೆ ಕುರಿತಂತೆ ವಿವರವಾದ ಮಾರ್ಗದರ್ಶಿಕೆ ರಾಜ್ಯ ಸರ್ಕಾರಗಳಿಗೆ ಬರಬೇಕಿದ್ದು, ತದನಂತರ ಸದರಿ ಯೋಜನೆಯಡಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಮನೆಗಳ ಸಂಖ್ಯೆಯ ವಿವರವನ್ನು ನೀಡಬಹುದಾಗಿರುತ್ತದೆ.

ಕೊಳಚೆ ಮುಕ್ತ ನಗರ ಯೋಜನೆಯಡಿ ಮೊದಲ ಹಂತದಲ್ಲಿ 10 ನಗರಗಳನ್ನು ಆಯ್ಕೆ ಮಾಡಲಾಗಿರುತ್ತದೆ. ಅವುಗಳೆಂದರೆ ಮೈಸೂರು, ಗುಲ್ಬರ್ಗಾ, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಬೆಳಗಾವಿ ಬಳ್ಳಾರಿ, ದಾವಣಗೆರೆ, ತುಮಕೂರು ಬೆಂಗಳೂರು ಹಾಗೂ ಶಿವಮೊಗ್ಗ. ಈ ಎಲ್ಲಾ

ನಗರಗಳಲ್ಲಿ ಸಮೀಕ್ಷೆಯಲ್ಲಿ ಗುರುತಿಸಿರುವ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸುವುದು ಅಥವಾ ಸ್ಥಳಾಂತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ. ಹಾಗೂ ಮೂಲಭೂತ ಸೌಕರ್ಯಗಳ ವಿಶ್ಲೇಷಣೆ ಕಾರ್ಯ ಪ್ರಗತಿಯಲ್ಲಿದೆ.

ಮೇಲ್ಕಂಡ ನಗರಗಳ ಮೂಲ ನಕ್ಷೆಯನ್ನು ಸಿದ್ಧಪಡಿಸಬೇಕಾಗಿದ್ದು, ಅದಕ್ಕಾಗಿ ಉಪಗ್ರಹ ಆಧಾರಿತ ಪ್ರತಿಮಾ ವಿಧಾನಗಳ ಮೂಲಕ ಅವುಗಳನ್ನು ಭೌಗೋಳಿಕ ಮಾಹಿತಿ ಆಧಾರಿತ (GIS) ಡೋಮೈನ್‌ಗೆ (Domain) ಸೇರಿಸುವ ಅಗತ್ಯತೆ ಇರುತ್ತದೆ. ಟೋಟಲ್ ಸ್ಟೇಷನ್ ಸರ್ವೆ ಹಾಗೂ ಕೊಳಚೆ ಪ್ರದೇಶಗಳ ಎಂಐಎಸ್ ಮತ್ತು ಜಿಐಎಸ್ ಮಾಹಿತಿಗಳನ್ನು ಒಟ್ಟುಗೂಡಿಸಿ ಕೊಳಚೆ ಪ್ರದೇಶಗಳ ನಕ್ಷೆಗಳನ್ನು ಸಿದ್ಧಪಡಿಸಲು ಕರ್ನಾಟಕ ರಾಜ್ಯ ರಿಮೋಟ್ ಸೆನ್ಸಿಂಗ್ ಅಪ್ಲಿಕೇಷನ್ ಸೆಂಟರ್ ರವರಿಗೆ ವಹಿಸಲಾಗಿರುತ್ತದೆ.

ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡ, ತುಮಕೂರು, ಮಂಗಳೂರು ಹಾಗೂ ಮೈಸೂರು ಮಹಾನಗರಪಾಲಿಕೆಗಳ ಸಮೀಕ್ಷೆಯ ಮಾಹಿತಿಯನ್ನು (ಸರ್ವೆ ಡಾಟಾ) ಮೊತ್ತೊಮ್ಮೆ ಪುನರ್ ಪರಿಶೀಲಿಸಿ ಬಿಟ್ಟು ಹೋಗಿದ್ದ ಎಲ್ಲಾ ಮಾಹಿತಿಗಳನ್ನು ಆನ್‌ಲೈನ್ ಅಪ್ಲಿಕೇಷನ್‌ನಲ್ಲಿ ದಾಖಲಿಸಲಾಗಿರುತ್ತದೆ. ಗುಲ್ಬರ್ಗಾ, ತುಮಕೂರು ಮತ್ತು ಮೈಸೂರು ಮಹಾನಗರಪಾಲಿಕೆಗಳಲ್ಲಿ DGPS ಹಾಗೂ Geo Referencing ಕಾರ್ಯ ಪೂರ್ಣಗೊಂಡಿರುತ್ತದೆ.

ಆ) ರಾಜೀವ್ ಆವಾಸ್ ಯೋಜನೆಯು ಆರಂಭಿಕ ಹಂತದಲ್ಲಿದ್ದು, ಕೇಂದ್ರ ಸರ್ಕಾರದಿಂದ ಯೋಜನೆಗೆ ಸಂಬಂಧಪಟ್ಟ ವಿವರವಾದ ಮಾರ್ಗದರ್ಶಿಕೆ ಬಂದ ನಂತರ ಯೋಜನೆಗೆ ತಗಲುವ ಒಟ್ಟು ವೆಚ್ಚ ಹಾಗೂ ಇದರಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಪಾಲುಗಳ ವಿವರಗಳನ್ನು ಒದಗಿಸಲಾಗುವುದು.

ಇ) ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣದಲ್ಲಿ ಕೊಳಚೆ ಪ್ರದೇಶಗಳ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ:-

ಒಟ್ಟು ಅಧಿಕೃತ ಕೊಳಚೆ ಪ್ರದೇಶಗಳ ಸಂಖ್ಯೆ. 10
ಕೊಳಚೆ ಪ್ರದೇಶಗಳಲ್ಲಿರುವ ಜನಸಂಖ್ಯೆ. 7528
ಕೊಳಚೆ ಪ್ರದೇಶಗಳಲ್ಲಿರುವ ಮನೆಗಳ ಸಂಖ್ಯೆ. 1073

ಕೇಂದ್ರ ಸರ್ಕಾರದಿಂದ ವಿವರವಾದ ಮಾರ್ಗದರ್ಶಿಕೆ ಬಂದ ನಂತರ ಮನೆಗಳನ್ನು ನಿರ್ಮಿಸುವ ಬಗ್ಗೆ ಕ್ರಮ ವಹಿಸಲಾಗುವುದು.